ಆ ಹೌದು

ಇ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಇದರ ಅವಶ್ಯಕತೆಯನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ವಿಷಯ:- ವಿಶ್ವ ಯೋಜನೆಯಲ್ಲಿ ವಕ್ಕುಂದ್ ಗ್ರಾಮದಲ್ಲಿ ದೊರೆಯುವ ಕೆಂಪು ಕಲ್ಲುಗಳಿಂದ (ಕ್ಯಾವಿ) ಡಿಸ್ಪೆಂಪರ್ ಅಥವಾ ಆಯಿಲ್ ಬಾಂಡ್ ಡಿಸ್ಪೆಂಪರ್ ತಯಾರಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1588 (2339)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾಂ ಜಿಲ್ಲೆ ಬೈಲಹೊಂಗಲ ವಕ್ಕುಂದ ಗ್ರಾಮದಲ್ಲಿ ಕೆಂಪು ಕಲ್ಲು ಹೆಚ್ಚಾಗಿದ್ದು (ಕ್ಯಾವಿ) ಈ ಕಲ್ಲಿನಿಂದ ಡಿಸ್ಪೆಂಪರ್ ಅಥವಾ ಆಯಿಲ್ ಬಾಂಡ್ ಡಿಸ್ಪೆಂಪರ್‌ನ್ನು ಮಾಡಲು ಅನುಕೂಲವಾದ ಸ್ಥಳ ಇರುವುದೆಂದು ಗಮನಕ್ಕೆ ಬಂದಿದೆಯೇ ?

ಆ ಹಾಗಿದ್ದಲ್ಲಿ ವಿಶ್ವ ಯೋಜನೆಯಲ್ಲಿ ಅಥವಾ ಬೇರೆ ಯೋವುದೇ ಯೋಜನೆಯ ಅಡಿಯಲ್ಲಿ ಅಲ್ಲಿ ದೊರೆಯುವ ಕೆಂಪು ಕಲ್ಲಿನಿಂದ ಡಿಸ್ಪಂಪರ್ ಕಾರ್ಖಾನೆ ಅಥವಾ ಆಯಿಲ್ ಬಾಂಡ್ ಡಿಸ್ಪಂಪರ್ ಕಾರ್ಖಾನೆಯನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಇ ಈ ಕೆಲಸಕ್ಕೆ ಸರ್ಕಾರದವರು ಕೂಡಲೇ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡುವರೆ ?

ಈ ಆ ಕೆಲಸಕ್ಕೆ ಎಷ್ಟು ಹಣ ಬೇಕಾಗುವುದು ಹಾಗೂ ಆದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರೆಯುವುದು ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ ಬೆಳಗಾವಿ ಜಿಲ್ಲೆಯ ವಕ್ಕುಂದ ಗ್ರಾಮದಲ್ಲಿ ಕೆಂಪುಕಲ್ಲು ದೊರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ ಇಲ್ಲಿ ದೊರೆಯುತ್ತಿರುವ ಕೆಂಪು ಕಲ್ಲಿನಿಂದ ಯಾವುದೇ ರೀತಿಯ ಡಿಸ್ಪೆಂಪರ್ ತಯಾರಿಸಲು ಬರುವುದಿಲ್ಲ.

ಇ ಅನ್ವಯಿಸುವುದಿಲ್ಲ.

ಈ ಅನ್ವಯಿಸುವುದಿಲ್ಲ.

ಛೇರ್‌ಮನ್ :- ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

2.ವರದಿಯನ್ನೊಪ್ಪಿಸುವುದು.

ಶ್ರೀ ಎಂ.ಶ್ರೀನಿವಾಸಯ್ಯ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ಪರವಾಗಿ ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 5ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ :- (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ):- ಮಾನ್ಯ ಉಪಾಧ್ಯಕ್ಷರೇ, 1975ನೇ ಸಾಲಿನ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಹಾಗೂ ನಿಯಂತ್ರಣ) ಅಧಿನಿಯಮದ ಮೇರೆಗೆ ನಿಯಮಾವಳಿಗಳನ್ನು ರಚಿಸಲು ಉಂಟಾಗಿರುವ ಅಗಾಧವಾದ ವಿಳಂಬಕ್ಕೆ ಸಂಬಂಧಿಸಿದ 17ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಛೇರ್ಮನ್:- ಎರಡೂ ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.

ದ.ಅ. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.

ವಿಷಯ:- ಗ್ಯಾನೈಟ್ ವ್ಯವಹಾರದ ಬಗ್ಗೆ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನಿಂದ ಉದ್ಭವಿಸಿರುವ ವಿಶೇಷವಾದ ಪರಿಸ್ಥಿತಿ.

+ ಶ್ರೀ ಡಿ.ಬಿ.ಚಂದ್ರೇಗೌಡ:- ತಾವು ಮುಂದಿನ ಕಾರ್ಯಕಲಾಪಗಳಿಗೆ ಹೋಗುವುದಕ್ಕೆ ಮುನ್ನ ಸಾರ್ವಜನಿಕ ಮಹತ್ವದ . . . .

ಛೇರ್ಮನ್:- ತಾವು ಯಾವುದರ ಬಗ್ಗೆ ಹೇಳುತ್ತೀರಿ ಎಂಬುದು ಗೊತ್ತಾಗಲಿಲ್ಲ.

ಒಬ್ಬ ಮಾನ್ಯ ಸದಸ್ಯರು :- ಈಗ 334ರ ನಿಯಮದ ಮೇರೆಗೆ ಇರತಕ್ಕ ವಿಷಯಗಳನ್ನು ತೆಗೆದುಕೊಳ್ಳಿ, ಅದಾದ ನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳಿ. . . .

ಶ್ರೀ ಡಿ.ಬಿ. ಚಂದ್ರೇಗೌಡ :- ನಾನು ನಿಯಮ 59ರ ಮೇರೆಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಈ ನಿಲುವಳಿ ಸೂಚನೆಯನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ಬಗ್ಗೆ ನಿಯಮ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿದ್ದರೆ ಅದನ್ನು ಓದಿ ಹೇಳುತ್ತೇನೆ.

ಛೇರ್ಮನ್ :- ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೋ ಕೇಳೋಣ. ನಂತರ ವಿಚಾರ ಮಾಡೋಣ.

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆ, ನಿಯಮ 59ರ ಪ್ರಕಾರ, it takes precedence over other business. Please try to understand the rules of business. ಇತ್ತೀಚೆಗೆ ರಾಜ್ಯದ ಉಚ್ಚ ನ್ಯಾಯಾಲಯ ಕೊಟ್ಟ ಒಂದು ತೀರ್ಪಿನ ಪರಿಣಾಮವಾಗಿ, ಉದ್ಭವಿಸಿರತಕ್ಕ ಗಂಭೀರವಾದ ಸಮಸ್ಯೆಯನ್ನು ವಿಶೇಷವಾಗಿ ನಿಲುವಳಿ ಸೂಚನೆ ಮೂಲಕ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಮೊನ್ನೆ ತಾನೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದೆ. ಈ ತೀರ್ಪಿನ ಪರಿಣಾಮ ಏನೆಂದರೆ, ರಾಜ್ಯಕ್ಕೆ ಬರತಕ್ಕಂಥ ಆದಾಯದ ಒಂದು ಭಾಗವಾದ ಮತ್ತು ವಿದೇಶಿ ವಿನಿಮಯ ಗಳಿಸತಕ್ಕಂಥ ಶಿಲೆಯ ವ್ಯವಹಾರ ಏನಿದೆ, ಈ ವ್ಯವಹಾರಕ್ಕೆ ರಾಜ್ಯಸರ್ಕಾರದವರು ದಿನಾಂಕ 18-6-91 ರಲ್ಲಿ ಲೈಸೆನ್ಸ್ ಕೊಡುವುದಕಾಗಿಯೇ, ಶಾಸನವನ್ನು ತಿದ್ದುಪಡಿ ಮಾಡಿ, ನಿಯಮಗಳನ್ನು ರಚನೆ ಮಾಡಿದ್ದರು, ಅದು ಅನೂರ್ಜಿತ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಆದರೆ ಇವತ್ತು ಇಡೀ ರಾಜ್ಯದಲ್ಲಿ ಒಂದು ರೀತಿಯ ವಿಶೇಷವಾದ ವಾತಾವರಣ ಉಂಟಾಗಿದೆ. ಈ ವಾತಾವರಣದಿಂದಾಗಿ ಪರವಾನಗಿ ಪಡೆದಿರತಕ್ಕಂಥವರಿಗೆ ಮುಂದೆ ಏನು ಮಾಡಬೇಕೆನ್ನುವುದು ಗೊತ್ತಿಲ್ಲ. ಪರವಾನಗಿ ಕೊಟ್ಟ ಸರಕಾರ ತನ್ನ ವ್ಯಾಪ್ತಿಯೊಳಗೆ ಕೊಟ್ಟಿದೆಯೇ ಇಲ್ಲವೇ, ಎಂಬುದನ್ನು ಆಲೋಚನೆ ಮಾಡಿ ಮರು ಪರಿಶೀಲನೆ ಮಾಡತಕ್ಕಂಥ ಒಂದು ಸಂದರ್ಭ ಮತ್ತು ರಾಜ್ಯದ ಬೊಕ್ಕಸಕ್ಕೆ ಬರುವ ಇಷ್ಟು ದೊಡ್ಡ ಪ್ರಮಾಣದ ಆದಾಯ ಒಂದು ರೀತಿ ಏನು ಸ್ಥಗಿತಗೊಂಡಿದೆ, ಇದರ ಪರಿಣಾಮ ತುಂಬಾ ದೊಡ್ಡ ಪ್ರಮಾಣದಲ್ಲಿ ರಾಜ್ಯದಲ್ಲಿ ಆಗಬಹುದು. ಆದುದರಿಂದ ಇಂತಹ ಒಂದು ವಿಶೇಷ ಸಂದರ್ಭವನ್ನು ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯ ಮೂಲಕ ತಮ್ಮ ಅನುಮತಿಯನ್ನು ಕೇಳುವುದಕ್ಕೆ ನಾನು ಇಲ್ಲಿ ನಿಂತುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷಿಣಿಯವರೇ, 1957 ರಲ್ಲಿ ಕೇಂದ್ರ ಸರಕಾರ ತಂದ ಒಂದು ಶಾಸನದ ಅಡಿಯಲ್ಲಿ ರಾಜ್ಯ ಸರಕಾರಕ್ಕೆ ಮೈಸೂರ್ ಮಿನರಲ್ ಮೈನಿಂಗ್ ಆಕ್ಟ್ ರೂಲ್ಸ್ ಫ್ರೇಮ್ ಮಾಡುವ ಅವಕಾಶ ಏನು ಕೊಟ್ಟಿತ್ತು ಅದರ ಪ್ರಕಾರ ರಾಜ್ಯ ಸರಕಾರಗಳು ಕಾಲ ಕಾಲಕ್ಕೆ ಏನು ಪರವಾನಗಿಯನ್ನು ಕೊಡುತ್ತಾ ಬಂದರು, ಅದು ಒಂದು ಉತ್ತುಂಗ ಶಿಖರವನ್ನು ತಲುಪಿದಮೇಲೆ ನ್ಯಾಯ ಮೂರ್ತಿ ಶ್ರೀಮಾನ್ ರಾಜೇಂದ್ರ ಬಾಬು ಅವರು 16-3-92 ರಲ್ಲಿ, ಇದು ನನಗೆ ಸಿಕ್ಕಿರತಕ್ಕಂಥ ಕಾಪಿಯಲ್ಲಿ ಇರತಕ್ಕಂಥ ತಾರೀಖು, ಈ ತಾರೀಖಿಗೆ, ರಾಜ್ಯದ